ಕೃಷಿ ಯಂತ್ರೋಪಕರಣವನ್ನು ಸಹಾಯಧನದಲ್ಲಿ ವಿತರಿಸಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕಾಗಿ ಟ್ರಾಕ್ಟರ್‌ಗಳಿಗೆ ಸಹಾಯಧನವನ್ನು ಸ್ಥಗಿತಗೊಳಿಸಲಾಗಿದೆ.

(ಆ) ಇಲ್ಲ.

ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಅವ್ಯವಹಾರ

299(228) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಸಕ್ಕರೆ ಮತ್ತು ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

(ಅ) ಕಿತ್ತೂರು ಮತಕ್ಷೇತ್ರದ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಎಂ.ಕೆ. ಹುಬ್ಬಳ್ಳಿಯಲ್ಲಿ ನಡೆಯುತ್ತಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು);

(ಇ) ಕಾರ್ಖಾನೆಯಲ್ಲಿ ನಡೆಯುತ್ತಿರುವ ಅವ್ಯವಹಾರಗಳ ಬಗ್ಗೆ ಕಾನೂನಿನ ರೀತ್ಯ ಕ್ರಮ ಕೈಗೊಳ್ಳಲು ಸರ್ಕಾರ ನಿರಾಸಕ್ತಿ ತೋರಿಸುತ್ತಿರುವುದು ನಿಜವೇ?

ಶ್ರೀ ಎ. ರವೀಂದ್ರನಾಥ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು)

(ಅ) ಹೌದು.

(ಆ) ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಕಾನೂನುಬಾಹಿರ ಕ್ರಮಗಳು, ಅವ್ಯವಹಾರಗಳು ಮತ್ತು ಕಾರ್ಖಾನೆ ಹಿತದೃಷ್ಟಿಗೆ ವಿರುದ್ಧವಾಗಿ ಕ್ರಮ ಕೈಗೊಂಡು ಆರ್ಥಿಕ ನಷ್ಟ ಉಂಟು ಮಾಡಿರುವುದರ ಬಗ್ಗೆ ಮಾಡಲಾಗಿರುವ 13 ಆರೋಪಗಳ ಸತ್ಯಾಸತ್ಯತೆಗಳನ್ನು ತಿಳಿಯಲು ಕಾರ್ಖಾನೆಯ ಲೆಕ್ಕ ಪತ್ರಗಳು ದಾಖಲಾತಿಗಳು ಹಾಗೂ ಸಾಕ್ಷ್ಯಾಧಾರಗಳೊಂದಿಗೆ ಪರಿಶೀಲಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64(1)ರನ್ವಯ ವಿಚಾರಣೆ ನಡೆಸಲು ಶ್ರೀ ಹೆಚ್.ಎಂ ವೀರಭದ್ರಸ್ವಾಮಿ, ವ್ಯವಸ್ಥಾಪಕ ನಿರ್ದೇಶಕರು, ನಂದಿ ಸಹಕಾರಿ ಸಕ್ಕರೆ ನಿ., ಕೃಷ್ಣಾನಗರ, ಬಿಜಾಪುರ ಜಿಲ್ಲೆ, ಇವರನ್ನು ವಿಚಾರಾಧಿಕಾರಿಗಳನ್ನಾಗಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಆದೇಶ ಸಂಖ್ಯೆ: ಡಿಎಸ್‌ಕೆ/ಇಎಸ್‌ಟಿಎಸ್/49/2009–10 ದಿನಾಂಕ 3.4.2010ರ ಮೂಲಕ ನೇಮಿಸಿ, ವಿಚಾರಣೆಯನ್ನು 90 ದಿನಗಳೊಳಗೆ ಪೂರ್ಣಗೊಳಿಸಿ ವರದಿ ಸೂಚಿಸಿದ್ದರು.

ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಲು ಕಾಲಕಾಲಕ್ಕೆ ಕಾಲಾವಕಾಶವನ್ನು ವಿಸ್ತರಿಸಲು ಕೋರಿದ್ದರ ಮೇರೆಗೆ ವಿಚಾರಣಾ ಅವಧಿಯನ್ನು ಅಂತಿಮವಾಗಿ ದಿನಾಂಕ 2.10.2011ರವರೆಗೆ ವಿಸ್ತರಿಸಲಾಗಿರುತ್ತದೆ. ವಿಸ್ತೃತ ಅವಧಿಯೊಳಗೆ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ದಿನಾಂಕ 24.6.2011ರ ಪತ್ರದಲ್ಲಿ ಆದೇಶಿಸಲಾಗಿತ್ತು.

ಆದರೆ, ಈ ವಿಚಾರಣೆಗೆ ಸಂಬಂಧಿಸಿದಂತೆ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಎರಡು ರಿಟ್ ಅರ್ಜಿಗಳು ರಿಟ್ ಅರ್ಜಿ ಸಂಖ್ಯೆ 67173-76/2010 ಮತ್ತು 68969-74/2011 ಹಾಗೂ ರಿಟ್ ಅಪೀಲು ಸಂಖ್ಯೆ: 6079-88/2011ರ ಪ್ರಕರಣಗಳಲ್ಲಿ ನ್ಯಾಯಾಲಯವು ನೀಡಿದ ಆದೇಶಗಳನ್ನು ಪಾಲಿಸುವಲ್ಲಿ ದಿನಾಂಕ 9.12.2010ರಿಂದ 13.9.2011ರವರೆಗೆ ವಿಚಾರಣಾ ಪ್ರಕ್ರಿಯೆಯು ಸ್ಥಗಿತಗೊಂಡಿತ್ತು.

ಇವುಗಳನ್ನು ಪರಿಗಣಿಸಿ ಪುನಃ ನಾಲ್ಕು ತಿಂಗಳ ಅಂದರೆ ದಿನಾಂಕ 3.10.2011 ರಿಂದ ದಿನಾಂಕ 2.2.2012ರವರೆಗೆ ಕಾಲಾವಕಾಶವನ್ನು ವಿಸ್ತರಿಸಬೇಕೆಂದು ವಿಚಾರಣಾಧಿಕಾರಿಗಳು ಪತ್ರ ಬರೆದು ಕೋರಿದ್ದು, ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959ರ ಕಲಂ 64(2)(ಎ) ರೀತ್ಯಾ ದತ್ತವಾದ ಅಧಿಕಾರದಂತೆ ವಿಚಾರಣಾ ಅವಧಿಯನ್ನು ದಿನಾಂಕ 3.10.2011ರಿಂದ ದಿನಾಂಕ 2.2.2012ರವರೆಗೆ ವಿಸ್ತರಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

(ಇ) ವಿಚಾರಣಾ ವರದಿಯ ಆಧಾರದಲ್ಲಿ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಕಿತ್ತೂರನ್ನು ಪಟ್ಟಣ ಪಂಚಾಯತಿಯನ್ನಾಗಿ ಮಾಡುವುದು

300(229) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) 41 ಸದಸ್ಯರನ್ನು ಹೊಂದಿದ ಕಿತ್ತೂರು ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರದ ಮುಂದಿದೆಯೇ;

(ಆ) ಹಾಗಾದರೆ ಪಟ್ಟಣ ಪಂಚಾಯತಿಯನ್ನು ಯಾವಾಗ ಪರಿವರ್ತಿಸಲಾಗುವುದು;

ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

(ಅ) ಇಲ್ಲ